



ಪಾರ್ಕಿನಲ್ಲಿ ಮರದ ಹಿಂದೆ ಒಬ್ಬ ಹುಡುಗಿ, ಒಬ್ಬ ಹುಡುಗ ಬಹಳ ಆತ್ಮೀಯವಾಗಿ ಕುಳಿತಿದ್ದರು. ವಾಕಿಂಗ್‌ಗಾಗಿ ಬಂದ ವೃದ್ಧರೊಬ್ಬರು ಇವರನ್ನು ನೋಡಿದರು.

ವೃದ್ಧ: ಇದು ನಮ್ಮ ಸಂಸ್ಕೃತಿಯೇ?

ಹುಡುಗ: ಅಲ್ಲ, ಇವಳು ದೀಕ್ಷಿತರ ಪ್ರಕೃತಿ!

★★★

ಅತ್ತೆ: ಭಗವಂತ, ನಿನಗೆ ಎರಡು ಕಣ್ಣುಗಳನ್ನು ಕೊಟ್ಟಿರುವಾಗ ಅಕ್ಕಿಯಲ್ಲಿನ ನಾಲ್ಕೈದು ಕಲ್ಲುಗಳನ್ನು ಆರಿಸಲು ನಿನಗೆ ಆಗಲಿಲ್ಲ.

ಸೊಸೆ: ಅದೇ ಭಗವಂತ ನಿಮಗೆ 32 ಹಲ್ಲುಗಳನ್ನು ಕೊಟ್ಟಿರುವಾಗ ನಾಲ್ಕೈದು ಕಲ್ಲುಗಳನ್ನು ತಿನ್ನಲಾಗದೇ?

★★★

ಸಂತಾ ಎವರೆಸ್ಟ್ ಶಿಖರ ಹತ್ತಿದ. ಅಲ್ಲಿ ಮೂವರು ಬಾಬಾಗಳು ಕುಳಿತು ತಂಬಾಕು ತಿಕ್ಕುತ್ತಿದ್ದರು.

ಸಂತಾ: ಬಾಬಾ ಇದೇನು?

ಬಾಬಾ: ಮಸಾಲೆ!

ಸಂತಾ: ಓಹೋ ಎವರೆಸ್ಟ್ ಮಸಾಲೆ ತಯಾರಿಸುವವರು ನೀವೇನಾ?

(ಸಂಗ್ರಹ) **ಶಾಲಿನಿ ವಿ.ಕಾಮತ್**

ಮೇಷ್ಟ್ರು: ಆ ಬೈಕ್ ಸವಾರನಿಗೆ ಯಾಕೆ ಹೊಡೀತೀರಿ? ಅವನ ಬೈಕ್ ಡಿಕ್ಕಿ ಹೊಡೆದ್ರು ನಂಗೇನೂ ಆಗಿಲ್ಲ ಸುಮ್ನೆ ಬಿಡಿ.

ವಿದ್ಯಾರ್ಥಿಗಳು: ಸರ್.. ನಿಮಗೆ ಏನೂ ಆಗಿಲ್ಲ ಎಂದೇ ಹೊಡಿತಿರೋದು!

★★★



ರಾಮು: ನನಗೆ ನಿನ್ನೆ ಕನಸ್ಸಿನಲ್ಲಿ ಕಾಲಿಗೆ ಮುಳ್ಳು ಚುಚ್ಚಿದಂತಾಯಿತು.

ಸೋಮು: ಹೌದಾ... ಹಾಗಾದರೆ ನಾಳೆ ರಾತ್ರಿ ಮಲಗುವಾಗ ಚಪ್ಪಲಿ ಹಾಕಿಕೊಂಡೇ ಮಲಗಿ ಬಿಡಿ.

★★★

ಗ್ರಾಹಕ: ನನಗೆ ತುಂಬಾ ವರ್ಷ ಬಾಳಿಕೆ ಬರುವ ಛತ್ರಿ ಕೊಡಿ

ಅಂಗಡಿಯಾತ: ಈ ಛತ್ರಿ ತೆಗೆದುಕೊಳ್ಳಿ. ಬಹಳ ವರ್ಷ ಬಾಳಿಕೆ ಬರುತ್ತೆ, ಆದರೆ, ಮಳೆಗಾಲ ಮತ್ತು ಬೇಸಿಗೆ ಕಾಲದಲ್ಲಿ ಬಳಸಬೇಡಿ.

★★★

ತಂದೆ: ರೇಡಿಯೋ ಬಂದ್ ಮಾಡು, ಕೇಳೋಕಾಗಲ್ಲ. ಕರ್ಕಶ ಶಬ್ದ..

ಮಗ: ನಾನು ರೇಡಿಯೋ ಹಚ್ಚಿಲ್ಲ. ಆಗಲೇನೇ ಬಂದ್ ಮಾಡಿದ್ದೇನೆ.

ತಂದೆ: ಆದರೂ ಏನೋ ಶಬ್ದ ಕೇಳಿ ಬರ್ತಾ ಇದೆ.

ಮಗ: ಅದು.. ಅಮ್ಮ ಬಾತ್ ರೂಮಿನಲ್ಲಿ ಹಾಡುತ್ತಿದ್ದಾರೆ.

(ಸಂಗ್ರಹ) **ಆಶಾ ಕೆರೆಗದ್ದೆ, ಶಿರಸಿ**

